ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 24–7–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Kidwai Memorial Institute of Oncology in collaboration with Tata Memorial Centre , Mumbai, Karnataka Medical Council Accredited CME on "Pediatric Neuro-Oncology"**<br><br>**Chief Guest:**<br><br>**Sri Lakshmi Narayan, IAS., Principal Secretary (Medical Education)** | **25-7-2015 Saturday 10.00 A.M** | **Kidwai Memorial Institute of Oncology Auditorium Bangalore** |
| 2 | ಬೆಳ್ಳಿ ಸಿನಿಮಾ – ಬೆಳ್ಳಿಮಾತು :<br><br>ಬೆಳ್ಳಿ ಮಾತು:<br>ಡಿಸೆಂಬರ್ – 1 ಚಿತ್ರದ ಪ್ರದರ್ಶನ ಹಾಗೂ ಸಂವಾದ:<br><br>ಪಿ. ಶೇಷಾದ್ರಿ, ಡಿಸೆಂಬರ್ – 1 ಚಿತ್ರದ ನಿರ್ದೇಶಕರು<br><br>ಅಧ್ಯಕ್ಷತೆ:<br><br>ಎಸ್.ವಿ. ರಾಜೇಂದ್ರಸಿಂಗ್ ಬಾಬು, ಅಧ್ಯಕ್ಷರು, | 25–07–2015 ಶನಿವಾರ ಸಂಜೆ 4–00 ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ರಸ್ತೆ, ಬೆಂಗಳೂರು |

| | | | |
|---|---|---|---|
| | ಕರ್ನಾಟಕ ಚಲನಚಿತ್ರ ಅಕಾಡೆಮಿ<br><br>ಪಾಲ್ಗೊಳ್ಳುವವರು:<br>ಡಿಸೆಂಬರ್ – 1 ಚಿತ್ರದ ಎಸ್.ಜಿ. ದತ್ತಾತ್ರೇಯ, ಕುಮಾರಿ ನಿವೇದಿತಾ, ಸಂತೋಷ್ ಉಪ್ಪಿನ, ಸಿ.ಆರ್. ಶಶಿಕುಮಾರ್. | | |

ನಿರ್ದೇಶಕರ ಪರವಾಗಿ

## ವಿಧಾನ ಮಂಡಲದ ಸುದ್ದಿಗಳು:

# ವಿಧಾನಸಭೆಯಲ್ಲಿ ಲೋಕಾಯುಕ್ತ ತಿದ್ದುಪಡಿ ವಿಧೇಯಕ ಮಂಡನೆ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ – 2015 ಅನ್ನು ರಾಜ್ಯ ವಿಧಾನಸಭೆಯಲ್ಲಿ ಇಂದು ಮಧ್ಯಾಹ್ನ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ ಅವರು ಮಂಡಿಸಿದರು.
ಬಾಬು:ಜಿಪಿಆರ್.

# ರಾಜ್ಯದಲ್ಲಿ ನಾಲ್ಕು ಆಹಾರ ಸಂಸ್ಕರಣ ಘಟಕ ಸ್ಥಾಪನೆ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಕರ್ನಾಟಕ ಆಹಾರ ನಿಯಮಿತದ ಉಸ್ತುವಾರಿಯಲ್ಲಿ ಕೋಲಾರ ಜಿಲ್ಲೆಯ ಮಾಲೂರು, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಹಾಗೂ ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ ಖಾಸಗಿ ಪ್ರವರ್ತಕರು ಆಹಾರ ಪಾರ್ಕ್‌ಗಳನ್ನು ಸ್ಥಾಪಿಸುತ್ತಿದ್ದಾರೆ ಎಂದು ಕೃಷಿ ಖಾತೆಯ ರಾಜ್ಯ ಸಚಿವ ಕೃಷ್ಣ ಭೈರೇಗೌಡ ಅವರು ಇಂದು ರಾಜ್ಯ ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಶಿವಾನಂದ ಎಸ್. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಈ ಆಹಾರ ಪಾರ್ಕ್‌ಗಳಲ್ಲಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ, ಸಿದ್ದಪಡಿಸಿದ ಆಹಾರ, ನಿರ್ಜಲೀಕರಣ ಮುಂತಾದ ಚಟುವಟಿಕೆಗಳು ನಡೆಯುತ್ತವೆ. ಈ ನಾಲ್ಕು ಆಹಾರ ಪಾರ್ಕ್‌ಗಳಿಗೆ ಕೇಂದ್ರ ಸರ್ಕಾರದಿಂದ ರೂ 13 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ 15 ಕೋಟಿ ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಆಹಾರ ಪಾರ್ಕ್‌ಗಳಿಗೆ ಮಾಲೂರಿನಲ್ಲಿ 87 ಎಕರೆ, ಹಿರಿಯೂರಿನಲ್ಲಿ 106 ಎಕರೆ,

ಬಾಗಲಕೋಟೆಯಲ್ಲಿ 100 ಎಕರೆ ಹಾಗೂ ಜೇವರ್ಗಿಯಲ್ಲಿ 105 ಎಕರೆ ಭೂಮಿ ಒದಗಿಸಲಿದ್ದು ಈ ಆಹಾರ ಪಾರ್ಕ್ ಗರಿಷ್ಠ ಉಪಯುಕ್ತತೆ ಇನ್ನು ಆಗಬೇಕಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದರು.

ಬಾಬು:ಜಿಪಿಆರ್.

## ಕೃಷಿ ಭಾಗ್ಯ ಯೋಜನೆಯಡಿ – ಕೃಷಿ ಹೊಂಡ ನಿರ್ಮಾಣ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ 2014-15 ನೇ ಸಾಲಿನಲ್ಲಿ ಕೃಷಿಭಾಗ್ಯ ಯೋಜನೆಯಡಿ ಒಟ್ಟು 22470 ಕೃಷಿ ಹೊಂಡಗಳ ನಿರ್ಮಾಣದ ಗುರಿಹೊಂದಲಾಗಿದೆ. ಈ ಯೋಜನೆಗೆ 2014-15 ರಲ್ಲಿ ರೂ. 500 ಕೋಟಿ ಹಣ ಬಿಡುಗಡೆಮಾಡಲಾಗಿದ್ದು, 14796 ಕೃಷಿ ಹೊಂಡ ನಿರ್ಮಾಣ ಮಾಡಲಾಗಿದೆ. ಈವರೆಗೆ 38.58 ಕೋಟಿ ರೂ. ಅನುದಾನ ವೆಚ್ಚ ಭರಿಸಲಾಗಿದೆ ಎಂದು ಕೃಷಿ ಖಾತೆ ರಾಜ್ಯ ಸಚಿವ ಕೃಷ್ಣ ಭೈರೇಗೌಡ ಅವರು ವಿಧಾನಸಭೆಯಲ್ಲಿ ಇಂದು ಪ್ರಶ್ನೋತ್ತರ ವೇಳೆಯಲ್ಲಿ ನಾಗಮಂಗಲ ಕ್ಷೇತ್ರದ ಶಾಸಕ ಎನ್. ಚಲುವರಾಯಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಕೃಷಿಭಾಗ್ಯ ಯೋಜನೆಯನ್ನು 2014-15 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಹಲವಾರು ಘಟಕಗಳನ್ನು ಪ್ಯಾಕೇಜ್ ರೂಪದಲ್ಲಿ ಅಳವಡಿಸಬೇಕಾಗಿದ್ದು ಕೃಷಿ ಹೊಂಡ ನಿರ್ಮಾಣ ಘಟಕ ಪ್ರಾರಂಭಿಕ ಘಟಕವಾಗಿದ್ದು, ಫಲಾನುಭವಿಗಳು ಪ್ರಥಮವಾಗಿ ಕೃಷಿ ಹೊಂಡ ನಿರ್ಮಾಣ ಮಾಡಿದ ನಂತರ ಉಳಿದ (ಸ್ಥಳದಲ್ಲಿಯೇ ಮಣ್ಣಿನ ತೇವಾಂಶ ಸಂರಕ್ಷಣೆ, ಬದು ನಿರ್ಮಾಣ, ಡೀಸಲ್ ಹಾಗೂ ಸೋಲಾರ್ ಪಂಪ್ ಸೆಟ್, ಲಘು ನೀರಾವರಿ ಘಟಕ ಮತ್ತು ಪರಿವರ್ತಿತ ಬೆಳೆ ಪದ್ಧತಿ. ಪ್ರಾತ್ಯಕ್ಷತೆ) ಇತರ ಘಟಕಗಳನ್ನು ಅನುಷ್ಠಾನ ಮಾಡಬೇಕಾಗಿರುತ್ತದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದರು.

ಬಾಬು:ಜಿಪಿಆರ್.

## ರಾಜ್ಯದಲ್ಲಿ ಮೂರು ವರ್ಷದಲ್ಲಿ 3750 ಹೊಸ ಸಹಕಾರ ಸಂಘ ನೋಂದಣಿ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಒಟ್ಟು 3750 ಸಹಕಾರ ಸಂಘಗಳು ಹೊಸದಾಗಿ ನೋಂದಣಿಯಾಗಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು 2046 ಸಹಕಾರ ಸಂಘಗಳು ಸಮಪಾನಗೊಂಡಿದೆ ಎಂದು ರಾಜ್ಯ ಸಹಕಾರ ಹಾಗೂ ಸಕ್ಕರೆ ಖಾತೆ ಸಚಿವ ಹೆಚ್.ಎಸ್. ಮಹಾದೇವಪ್ರಸಾದ್ ಅವರು ಇಂದು ಪ್ರಶ್ನೋತ್ತರ ವೇಳೆಯಲ್ಲಿ ಹಿರೇಕೆರೂರು ಶಾಸಕ ಯು.ಟಿ. ಬಣಕಾರ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಸಹಕಾರ ಸಂಘಗಳು ಸಹಕಾರ ಕಾಯ್ದೆ ಹಾಗೂ ನಿಯಮಾನುಸಾರ ಪ್ರತಿ ವರ್ಷ ವಾರ್ಷಿಕ ಮಹಾಸಭೆ ನಡೆಸದೇ ಇರುವುದು ಸಂಘಕ್ಕೆ ಚುನಾವಣೆ ಜರುಗಿಸದೇ ಇರುವುದು, ಪ್ರತಿ ವರ್ಷ ಲೆಕ್ಕಪರಿಶೋಧನೆ ಆಗದೇ ಇರುವುದು, ಸಂಘದಲ್ಲಿ ಲೆಕ್ಕಪತ್ರಗಳ ದಸ್ತಾವೇಜುಗಳನ್ನು ನಿರ್ವಹಿಸದೇ ಇರುವುದು, ಆಡಳಿತ ಮಂಡಳಿಯ ಸಭೆಯನ್ನು ಜರುಗಿದೇ ಇರುವುದು ಇತ್ಯಾದಿ ಕಾರಣಗಳಿಂದಾಗಿ ಸತತವಾಗಿ ಕಾರ್ಯನಿರ್ವಹಿಸದೇ ಸ್ಥಗಿತಗೊಂಡು ಉಪ ನಿಯಮದಲ್ಲಿನ ಧ್ಯೇಯೋದ್ದೇಶಗಳನ್ನು ಈಡೇರಿಸದೇ ವಿಫಲವಾಗಿ ಸಮಪಾನೆಗೊಂಡಿರುತ್ತದೆ. ಈ ಸಹಕಾರ ಸಂಘಗಳು ಸಮಪಾನೆಗೊಳ್ಳಲು ಸದಸ್ಯರ ನಿಷ್ಕ್ರಿಯತೆ, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ನಿರಾಸಕ್ತಿಯಿಂದಾಗಿ ಹಾಗೂ ಸಂಘದಲ್ಲಿನ ಕ್ರೋಢೀಕೃತ ನಷ್ಟ ಮತ್ತು ಷೇರು ಮೊತ್ತ ಶೂನ್ಯವಾದ ಪ್ರಯುಕ್ತ ಸಂಘಗಳ ಕಾರ್ಯಚಟುವಟಿಕೆಗಳೂ ಸ್ಥಗಿತಗೊಂಡಿದ್ದು ಸಮಪಾನೆಗೆ ಕಾರಣವಾಗಿರುತ್ತದೆ ಎಂದು ಸಚಿವರು ತಿಳಿಸಿದರು.

ಸಮಪಾನೆಗೊಂಡ ಸಹಕಾರ ಸಂಘಗಳಿಂದ 2012–13 ರಲ್ಲಿ 595 ಲಕ್ಷ ರೂ. ಗಳು, 2013–14 ರಲ್ಲಿ 2886 ಲಕ್ಷ ರೂ. ಗಳು ಹಾಗೂ 2014–15 ರಲ್ಲಿ 7123 ಲಕ್ಷ ರೂ. ಗಳು ನಷ್ಟವಾಗಿದೆ ಎಂದು ಸಚಿವರು ತಿಳಿಸಿದರು.

ಬಾಬು:ಜಿಪಿಆರ್.

# ಲಾಲ್‌ಬಾಗ್ ಉದ್ಯಾನವನ ಅಭಿವೃದ್ಧಿಗೆ ಯೋಜನೆ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನ ಅಭಿವೃದ್ದಿಗೆ ಯೋಜನೆ ತಯಾರಿಸಲಾಗಿದ್ದು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 498 ಲಕ್ಷ ರೂ. ಮತ್ತು ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು ಯೋಜನೆಯಡಿ 200 ಲಕ್ಷ ರೂ. ವೆಚ್ಚಮಾಡಲು ಯೋಜನೆ ರೂಪಿಸಲಾಗಿದೆ ಎಂದು ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಡಾ. ಶ್ಯಾಮನೂರು ಶಿವಶಂಕರಪ್ಪ ಅವರು ಇಂದು ವಿಧಾನಸಭೆಯಲ್ಲಿ ಮಹಾಲಕ್ಷ್ಮೀ ಲೇಔಟ್ ಕ್ಷೇತ್ರದ ಶಾಸಕ ಕೆ. ಗೋಪಾಲಯ್ಯ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಲಾಲ್‌ಬಾಗ್ ಉದ್ಯಾನವನದಲ್ಲಿ ವಿವಿಧ 13 ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ 500 ಲಕ್ಷ ರೂ. ವಿನಿಯೋಗಿಸಲು ಉದ್ದೇಶಿಸಲಾಗಿದೆ ಹಾಗೂ ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು ಯೋಜನೆಯಡಿ 2015–16 ನೇ ಸಾಲಿನ ಮೊದಲನೇ ತ್ರೈಮಾಸಿಕಕ್ಕೆ ರೂ. 30 ಲಕ್ಷ ಬಿಡುಗಡೆಮಾಡಲಾಗಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಅಲ್ಪಸಂಖ್ಯಾತರ ವಸತಿ ನಿಲಯ ನಿರ್ಮಾಣಕ್ಕೆ 40 ಕೋಟಿ ರೂ. ಅನುದಾನ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ 2013–14 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ರೂ. 40 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು ಪ್ರತಿ ವಸತಿ ನಿಲಯಕ್ಕೆ 57.14 ಲಕ್ಷ ರೂ. ಗಳಂತೆ ಒಟ್ಟು 70 ವಸತಿ ನಿಲಯಗಳಿಗೆ 40 ಕೋಟಿ ರೂ. ಅನುದಾನ ಬಿಡುಗಡೆಮಾಡಲಾಗಿದೆ ಎಂದು ರಾಜ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಖಾತೆಯ ಸಚಿವ ಡಾ. ಖಮರುಲ್ ಇಸ್ಲಾಂ ಅವರು ಇಂದು ವಿಧಾನಸಭೆಯಲ್ಲಿ ಲಿಂಗಸುಗೂರು ಕ್ಷೇತ್ರದ ಶಾಸಕ ಮಾನಪ್ಪ ಡಿ. ವಜ್ಜಲ್ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈ ಯೋಜನೆಯಡಿಯಲ್ಲಿ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ. ಈಗಾಗಲೇ ನಿಗದಿಪಡಿಸಿರುವ ಅನುದಾನ ಬಿಡುಗಡೆಮಾಡಲಾಗಿದೆ. ಅನುದಾನ ಉಳಿಕೆ ಇರುವುದಿಲ್ಲವೆಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಟ್ಟದಲ್ಲಿ ಕನಿಷ್ಠ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸುವುದು ಸರ್ಕಾರದ ನೀತಿಯಾಗಿದೆ ಎಂದು ಸಹಕಾರ ಮತ್ತು ಸಕ್ಕರೆ ಖಾತೆ ಸಚಿವ ಹೆಚ್.ಎಸ್. ಮಹದೇವಪ್ರಸಾದ್ ಅವರು ಇಂದು ವಿಧಾನಸಭೆಯಲ್ಲಿ ಹಿರೇಕೆರೂರು ಕ್ಷೇತ್ರದ ಶಾಸಕ ಯು.ಬಿ. ಬಣಕಾರ್ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ ನಬಾರ್ಡ್‌ನ ಮಾರ್ಗಸೂಚಿಗೊಳಪಟ್ಟು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಅನುಗುಣವಾಗುವಂತೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲು ಸರ್ಕಾರದಿಂದ ಅನುಮತಿ ನೀಡಲಾಗಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದರು.

ಬಾಬು:ಜಿಪಿಆರ್.

# ರಾಜ್ಯದಲ್ಲಿ 60 ಸಾರ್ವಜನಿಕ ಉದ್ದಿಮೆಗಳು

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 60 ಸಾರ್ವಜನಿಕ ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ರಾಜ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಖಾತೆಯ ಸಚಿವ ಡಾ. ಖಮರುಲ್ ಇಸ್ಲಾಂ ಅವರು ಇಂದು ವಿಧಾನಸಭೆಯಲ್ಲಿ ಶ್ರವಣಬೆಳಗೊಳ ಕ್ಷೇತ್ರದ ಶಾಸಕ ಸಿ. ಎನ್. ಬಾಲಕೃಷ್ಣ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಪ್ರಸ್ತುತ 45 ಸಾರ್ವಜನಿಕ ಉದ್ದಿಮೆಗಳು ಲಾಭದಲ್ಲಿದೆ ಹಾಗೂ 15 ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿದೆ ಎಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಪತ್ರಿಕಾ ಪ್ರಕಟಣೆ

## ಪ್ರಗತಿ ಪದವಿಪೂರ್ವ ಕಾಲೇಜು ರದ್ದು

ಬೆಂಗಳೂರು, ಜುಲೈ 24(ಕರ್ನಾಟಕ ವಾರ್ತೆ):

ಬೆಂಗಳೂರು ಕಾಡುಗೋಡಿಯ ವೈಟ್‌ಫೀಲ್ಡ್ ರೈಲ್ವೆಸ್ಟೇಷನ್ ರಸ್ತೆಯಲ್ಲಿರುವ ಪ್ರಗತಿ ಪದವಿಪೂರ್ವ ಕಾಲೇಜಿನ ಶೈಕ್ಷಣಿಕ ಮಾನ್ಯತೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ಪ್ರಗತಿ ಪದವಿಪೂರ್ವ ಕಾಲೇಜಿನ 2015-16 ನೇ ಶೈಕ್ಷಣಿಕ ಸಾಲಿಗೆ ದಾಖಲಾಗಿರುವ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳನ್ನು ಹತ್ತಿರದ ಪದವಿಪೂರ್ವ ಕಾಲೇಜಿಗೆ ವರ್ಗಾಯಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಶಿಕ್ಷಣ ಇಲಾಖೆಯ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಉಪ ನಿರ್ದೇಶಕರಿಗೆ ಆದೇಶದಲ್ಲಿ ಸೂಚಿಸಲಾಗಿದೆ.
ಬಾಬು/ಕೆಎಂ

# ಈ ಶನಿವಾರದ ಬೆಳ್ಳಿ ಸಿನಿಮಾ – ಡಿಸೆಂಬರ್ – 1
# ಚಿತ್ರ ನಿರ್ದೇಶಕ ಪಿ. ಶೇಷಾದ್ರಿ

ಬೆಂಗಳೂರು, ಜುಲೈ 24(ಕರ್ನಾಟಕ ವಾರ್ತೆ):

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಕಳೆದ ಶನಿವಾರ ನೂತನವಾಗಿ ಪ್ರಾರಂಭಿಸಿರುವ ಬೆಳ್ಳಿ ಸಿನಿಮಾ – ಬೆಳಿಮಾತು ಕಾರ್ಯಕ್ರಮದಲ್ಲಿ ಬರುವ ಶನಿವಾರ ಜುಲೈ 25 ರಂದು 4–00 ಗಂಟೆಗೆ ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಕನ್ನಡ ಚಿತ್ರರಂಗದ ನಿರ್ದೇಶಕ ಪಿ. ಶೇಷಾದ್ರಿ ಅವರ ಡಿಸೆಂಬರ್ – 1 ಚಲನಚಿತ್ರ ಪ್ರದರ್ಶನ ಹಾಗೂ  ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

ಈ ಸಮಾರಂಭದ ಅಧ್ಯಕ್ಷತೆಯನ್ನು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಹಾಗೂ ಕನ್ನಡ ಚಲನಚಿತ್ರ ರಂಗದ ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ವಹಿಸುವರು.  ಅಂದಿನ ಕಾರ್ಯಕ್ರಮದಲ್ಲಿ ಡಿಸೆಂಬರ್ – 1 ಚಿತ್ರ ತಂಡದ ಹೆಚ್.ಜಿ. ದತ್ತಾತ್ರೇಯ, ಕುಮಾರಿ. ನಿವೇದಿತಾ, ಸಂತೋಷ್ ಉಪ್ಪಿನ ಹಾಗೂ ಸಿ.ಆರ್. ಶಶಿಕುಮಾರ್ ಅವರು ಪಾಲ್ಗೊಳ್ಳುವರು.  ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬಾಬು:ಜೆಪಿಆರ್.